International Journal of Kannada Research 2017; 3(3): 05-08

International Journal of Kannada Research
www.kannadajournal.com

ISSN: 2454–5813
IJKR 2017; 3(3): 05-08
© 2017 IJKR
www.kannadajournal.com
Received: 02-05-2017
Accepted: 03-06-2017

**ಶ್ರೀರಕ್ಷಾ ಎಸ್. ಆರ್**
ಬಿ.ಸಿ.ಎ. ವಿಧ್ಯಾರ್ಥಿನಿ ನ್ಯೂ ಹಾರಿಝಾನ್ ಕಾಲೇಜು ಮಾರತ್ ಹಳ್ಳಿ ರಿಂಗ್ ರೋಡ್ ಬೆಂಗಳೂರು-೫೬೦೧೦೩

**Correspondence**
**ಶ್ರೀರಕ್ಷಾ ಎಸ್. ಆರ್**
ಬಿ.ಸಿ.ಎ. ವಿಧ್ಯಾರ್ಥಿನಿ ನ್ಯೂ ಹಾರಿಝಾನ್ ಕಾಲೇಜು ಮಾರತ್ ಹಳ್ಳಿ ರಿಂಗ್ ರೋಡ್ ಬೆಂಗಳೂರು-೫೬೦೧೦೩

# ಶ್ರೀ ಹರಿಹರೇಶ್ವರ ಸ್ವಾಮಿ ಪ್ರಸನ್ನ ಮಧುಗಿರಿಯ ಶ್ರೀ ಹರಿಹರೇಶ್ವರ ಸ್ವಾಮಿಯ ಐತಿಹಾಸಿಕ ಜಾತ್ರಾ ಮಹೋತ್ಸವದ ವೈಶಿಷ್ಟ್ಯ

**ಶ್ರೀರಕ್ಷಾ ಎಸ್. ಆರ್**

ಕರ್ನಾಟಕದಲ್ಲಿ ಹಲವಾರು ಐತಿಹಾಸಿಕ ಮಹತ್ವಗಳನ್ನು ಹೊಂದಿರುವ ದೇವಾಲಯಗಲಿವೆ.ಅವುಗಳಲ್ಲಿ ಮಧುಗಿರಿಯ ಶ್ರೀ ಹರಿಹರೇಶ್ವರ ಸ್ವಾಮಿಯ ದೇವಲಯವೂ ಒಂದು.ಕರ್ನಾಟಕದ ಬೆಂಗಳೂರಿನಿಂದ ಸುಮಾರು ೧೧೦ ಕಿ.ಮಿ. ದೂರದಲ್ಲಿರುವ ಮಧುಗಿರಿ ಎಂಬ ಪ್ರದೇಶದಲ್ಲಿ ನೆಲೆಸಿರುವ ಹರಿಹರೇಶ್ವರ ಸ್ವಾಮಿಯ ದೇವಸ್ಥಾನವಿದೆ.ಇದು ತನ್ನದೇ ಆದ ಐತಿಹಸಿಕ ಹಾಗು ಧಾರ್ಮಿಕ ಮಹತ್ವವನ್ನು ಹೊಂದಿದೆ.

## ಇತಿಹಾಸ

ಈ ದೇವಸ್ಥಾನದ ಇತಿಹಾಸದ ಎಳೆಗಳನ್ನು ನೋಡುತ್ತಾ ಹೋದರೆ ಮುಲತಃ ದಾವಣಗೆರೆಯ ಹರಿಹರದಲ್ಲಿ ನೆಲೆಸಿರುವ ದೈವವಾಗಿದೆ. ಹರಿ ಎಂದರೆ ವಿಷ್ಣು,ಹರ ಎಂದರೆ ಶಿವ. ಇವರಿಬ್ಬರೂ ಒಟ್ಟುಗೂಡಿ ಹರಿಹರರಾಗಿ ಇಲ್ಲಿ ಅವತರಿಸಿದರು. ಈ ದೇವರ ಇತಿಹಾಸವೇನೆಂದರೆ ಪುರಾಣದಲ್ಲಿ ಬರುವ ಗುಹನೆಂಬ ರಾಕ್ಷಸನು ಬ್ರಹ್ಮನಿಂದ ಒಂದು ವರ ಪಡೆದಿರುತ್ತಾನೆ. ಏನೆಂದರೆ ಹರಿಯು ಅಥವಾ ಹರನು ಒಬ್ಬಂಟಿಯಾಗಿ ತನನ್ನು ಕೊಲ್ಲಲು ಸಾಧ್ಯವಿಲ್ಲದಂತಾಗಲಿ ಎಂಬ ವರ ಪಡೆದು ಇದರಿಂದಾಗಿ ಅವನು ಪ್ರಭಾವಶಾಲಿಯಾಗುತ್ತಾನೆ.ಇಂದ್ರಲೋಕ ಹಾಗು ಭೂಲೋಕದ ಜನರಿಗೆ ಬಹಳ ಉಪಟಳಗಳನ್ನು ನೀಡುತ್ತಿರುತ್ತಾನೆ.ಇದರಿಂದ ಮುಕ್ತಿ ನೀಡಬೇಕೆಂದು, ಜನರುನ್ನು ಇವನ ಕಿರುಕುಳಗಳಿಂದ ಬಿಡುಗಡೆ ನೀಡಬೇಕೆಂದು ಶಿವ ಮತು ವಿಷ್ಣು ಇಬ್ಬರೂ ಒಬ್ಬರಾಗಿ ಅವತರಿಸಿ ಗುಹನ ಸಂಹಾರ ಮಾಡಿ, ಶ್ರೀ ಹರಿಹರೇಶ್ವರರಾಗಿ ಗಂಗಾ, ಗೌರಿ ,ಶ್ರೀದೇವಿ,ಭೂದೇವಿ ಸಮೇತ ಹರಿದ್ರಾ ಮತ್ತು ತುಂಗಭದ್ರಾ ನದಿಯ ಸಂಗಮದ ಸಮೀಪದಲ್ಲಿ ಅವತಾರ ತಾಳಿ ಹರಿಹರದಲ್ಲಿ ನೆಲೆಸಿದರು.ಮೂರ್ತಿಯ ಅರ್ಧ ಭಾಗದಲ್ಲಿ ಹರನು ತನ್ನ ಪತ್ನಿಯರಾದ ಗೌರಿ ಮತ್ತು ಗಂಗೆಯರೊಡನೆ ಹಾಗು ತ್ರಿಶೂಲ,ರುದ್ರಾಕ್ಷಿಮಾಲೆಯೊಂದಿಗೆ ಇದ್ದು ಮತ್ತೊಂದು ಅರ್ಧ ಹರಿಯು ತನ್ನ ಪತ್ನಿಯರಾದ ಶ್ರೀದೇವಿ- ಭೂದೇವಿಯರೊಡನೆ ಶಂಖ ,ಚಕ್ರದೊಂದಿಗೆ ಶೋಭಿಸುತ್ತಿದ್ದಾನೆ.ಅಂದಿನಿಂದ ಸಾವಿರಾರು ಭಕ್ತರ ಮನೆದೇವರಾಗಿ ಅವರ ಎಲ್ಲಾ ಕಷ್ಟಗಳನ್ನು

ಪರಿಹರಿಸಿ ದುಷ್ಟರನ್ನು ಶಿಕ್ಷಿಸಿ,ಶಿಷ್ಟರನ್ನು ರಕ್ಷಿಸಿ ಎಲ್ಲರ ಭಕ್ತಿಗೆ ಪಾತ್ರರಾಗಿದ್ದಾರೆ.

ಈ ದೇವರು ಮಧುಗಿರಿಯಲ್ಲಿ ನೆಲೆಸಿರುವ ವೈಶಿಷ್ಟ್ಯವೇನೆಂದರೆ ಹರಿಹರನನ್ನು ಕಾಣಲು ಬಹು ದೂರದಿಂದ ಜನರು ಬರುತ್ತಿದ್ದರು.ಅವರಿಗೆ ಅಷ್ಟು ದೂರದಿಂದ ಸ್ವಾಮಿಯನ್ನು ಕಾಣಲು ಬರಲು ಕಷ್ಟವಾಗುತ್ತಿತ್ತು.ಒಮ್ಮೆ ಹರಿಹರನು ಒಬ್ಬ ಪೂಜಾರಿಯ ಕನಸ್ಸಿನಲ್ಲಿ ಬಂದು , ಭಕ್ತರ ಒಳಿತಿಗಾಗಿ ತಾನು ಮಧುಗಿರಿಯಲ್ಲಿ ನೆಲೆಸುವುದಾಗಿ ಹೇಳಿದ.ಮರು ದಿನ ಬಂದು ನೋಡಿದರೆ, ದೇವರು ಮಧುಗಿರಿ ಈಗಿನ ಹರಿಹರೊಪ್ಪದಲ್ಲಿ ಉದ್ಭವವಾಗಿದ್ದರು. ಅಂದಿನಿಂದ ಅಲ್ಲಿನ ಸುತ್ತಮುತ್ತಲಿನ ಜನರು ಮತ್ತು ಸುಮಾರು ಹತ್ತಿರದಲ್ಲಿರುವವರು ಹರಿಹರೇಶ್ವರನ ದರ್ಶನ ಪಡೆಯಲು ಮಧುಗಿರಿಗೆ ಬರುಲು *ಪ್ರಾರಂಭಿಸಿದರು. ನಂತರ ಈ ದೇವಸ್ಥಾನವನ್ನು ೧೦ನೇ ಶತಮಾನದಲ್ಲಿ(ಕ್ರ.ಶ. ೯೭೯) ಬಡಗನಾಡು ಬ್ರಾಹ್ಮಣ ಕರಿಣಿಕ ಕರಿಯಪ್ಪ ಎಂಬಾತ ತನ್ನ ಸ್ನೇಹಿತರ ಸಹಾಯದೊಂದಿಗೆ ಕಟ್ಟಿದರು. ಅನಂತರ ಚಾಲುಕ್ಯರು ಈ ದೇವಾಲಯವನ್ನು ಅಭಿವೃದ್ಧಿಗೊಳಿಸಿದರು. ದೇವಸ್ಥಾನದ ಎಡಭಾಗದ ಬಂಡೆಯ ಮೇಲೆ ಒಂದು ಶಾಸನ ಸಿಕ್ಕಿದ್ದು , ಆ ಶಾಸನದ ಪ್ರಕಾರ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನವು ೧೭೪೦ನೇ ಎಸವಿ ವಿಳಂಬಿನಾಮ ಸಂವತ್ಸರದ ಶಿವರಾತ್ರಿಯಂದು ಆಗಿನ ಮಧುಗಿರಿಯ ಪಾಳೆಗಾರ ಅಹೋಬಲರಾಯನು ಬಿಜವದ ಶಾನುಭೋಗ ದೇವರಸಯ್ಯನವರ ಮಗ ರಾಮರಸಯ್ಯನವರಿಗೆ ದೇವದಾಯವಾಗಿ ಮತ್ತು ಓಬಳಾಪುರ,ಗಂಜಲಗುಂಟೆ,ಬಿಜವರ ಮತ್ತು ಮಧುಗಿರಿಹಳ್ಳಿ ಗ್ರಾಮಗಳನ್ನು ಬ್ರಹ್ಮದಾಯವಾಗಿ ಕೊಟ್ಟರು.*

*ಪ್ರಾಕೃತಿಕ ವರ್ಣನೆ*

*ಈ ಊರಿಗೆ ಮೊದಲು 'ಮದ್ದಗಿರಿ'ಯೆಂದು ಹೆಸರಿತ್ತು.ಮುಂದೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಈ ಸುಂದರ ಪ್ರದೇಶವನ್ನು ನೋಡಿ ಮನಸೋತು ಇದು 'ಮಧುಗಿರಿ' ಅಂದರೆ ಜೇನಿನಂತಹ ಬೆಟ್ಟಗಳನ್ನು ಹೊಂದಿರುವ ಸ್ಥಳ ಎಂದು ಮರುನಾಮಕರಣ ಮಾಡಿದರು.ಇಲ್ಲಿನ ಪ್ರಕೃತಿ ವರ್ಣನೆ ಎಲ್ಲೆಗೆ ಮೀರಿದ್ದು. ಎಷ್ಟು ವರ್ಣಿಸಿದರೂ ಒಮ್ಮೆ ಅದರ ಸೌಂದರ್ಯವನ್ನು ಕಣ್ಣಾರೆ ಕಂಡು ಆನಂದಿಸುವವರೆಗೂ ತೃಪ್ತಿಯಾಗುವುದಿಲ್ಲ. ಎಲ್ಲಿ ನೋಡಿದರಲ್ಲಿ ಹಚ್ಚಹಸಿರು.ದೇವಸ್ಥಾನವು ಬೆಟ್ಟದ ಮೇಲೆ ಇದ್ದು ಸುತ್ತಲೂ ಪ್ರಾಕೃತಿಕ ಸೌಂದರ್ಯ ಕಣ್ಸೆಳೆಯುವಂತೆ ಆವರಿಸಿದೆ.ಒಂದೊಂದು ಬೆಟ್ಟ ದೇವರ ಒಂದೊಂದು ಹಿರಿಮೆಯನ್ನು ಹೇಳವಂತೆ ಮತ್ತು ಅಲ್ಲಿನ ಮರಗಿಡಗಳು ಭಕ್ತರ ರೀತಿಯಲ್ಲಿ ಕುಳಿತು ಆ ಕಥೆಗಳನ್ನು ಭಕ್ತಿಯಿಂದ ಕೇಳುವ ರೀತಿಯಲ್ಲಿ ಪ್ರಕೃತಿಯು ಭಕ್ತಿಭರಿತವಾಗಿ ಸುಂದರವಾಗಿದೆ. ಬೆಳಗ್ಗಿನ ಜಾವ ಬೆಳ್ಳಿ ಮೋಡಗಳು ಬೆಟ್ಟಗಳನ್ನು ನುಂಗುತ್ತಿರುವೆಯೋ ಎಂಬಂತೆ ಮಂಜು ಕವಿದಿರುತ್ತದೆ . ಮಧ್ಯಾಹ್ನವಾದರೆ ಸುಡು ಬಿಸಿಲು, ಸಂಜೆ ತಂಪಾದ ಗಾಳಿ ರಾತ್ರಿಯಾದರೆ ಆಕಾಶದಲ್ಲಿ ನಕ್ಷತ್ರಗಳ ಸಂಖ್ಯ ಎಷ್ಟಿರುತ್ತವೆಯೋ ಅಷ್ಟೇ ಅಪರಿಮಿತ ಚಳಿ.ಅಲ್ಲಿನ ವಾತಾವರಣವನ್ನು ನೋಡಿ ಅನುಭವಿಸಿದವರಿಗೆ ಮಾತ್ರ ಅದರ ಸೊಬಗು ತಿಳಿಯುವುದು.ಅಲ್ಲಲ್ಲಿ ಸಣ್ಣ ಪುಟ್ಟ ಝರಿ ಮತು ಹಳ್ಳಗಳು ಕಂಡು ಬರುತ್ತವೆ.ಬೆಟ್ಟಗುಡ್ಡ, ಗಿಡ ಮರ ಝರಿ ಹಳ್ಳಗಳ ನಡುವೆ ಈ ದೇವಾಲಯು ಶೋಭಿಸುತ್ತಿದೆ.ಬೆಟ್ಟದಲ್ಲಿ ಹಲವು ಪ್ರಾಣಿಗಳು ವಾಸಿಸುತ್ತವೆ. ಅವುಗಳಲ್ಲಿ ಚಿರತೆ,ಕರಡಿ,ಹಾವು ಮುಂತಾದ ಪ್ರಾಣಿಗಳು ಪ್ರಮುಖವಾದವು.*

*ಶ್ರೀ ಹರಿಹರೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ:-*

*ಹರಿಹರನನ್ನು ಮನೆದೇವರನ್ನಾಗಿ ಗಂಜಲಗುಂಟೆ, ಸಿದ್ದಾಪುರ, ಯಲ್ಕೂರು, ಹೂವಿನಳ್ಳಿ, ಬಿಜವರ ಮುಂತಾದ ಹಳ್ಳಿಗಳು ಸ್ವೀಕರಿಸಿದೆ.ಹಿಂದೂ ಮತ್ತು ಜೈನ ದೇವರ ಮನೆಯದೇವರಾಗಿದೆ.ಮಧುಗಿರಿ ಶ್ರೀ ಹರಿಹರೇಶ್ವರ ಸ್ವಾಮಿಯ ದೇವಸ್ಥಾನವು ಪ್ರತಿದಿನ ತೆರೆಯಲಿರುತ್ತದೆ.ದಿನವು ವಿಶೇಷ ಪೂಜೆ ನಡೆಯುತ್ತದೆ.ವರ್ಷಕ್ಕೆ ಒಮ್ಮೆ ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿಯ ಜಾತ್ರಾಮಹೋತ್ಸವವು ನಡೆಯುತ್ತದೆ. ಅದರಲ್ಲಿ ಬ್ರಹ್ಮರಥೋತ್ಸವವು ಮಾರ್ಗಶಿರಮಾಸ,ಶುಕ್ಲಪಕ್ಷ, ಕೃತಿಕಾ ನಕ್ಷತ್ರದಂದು ಆದ್ದೂರಿ ವಿಜೃಂಬಣೆಯಿಂದ ನಡೆಯುತ್ತದೆ.ಶ್ರೀ ಹರಿಹರೇಶ್ವರ ಹಾಗು ಗಂಗೆ,ಗೌರಿ,ಶ್ರೀದೇವಿ,ಭೂದೇವಿಯರ ಕಲ್ಯಾಣೋತ್ಸವವೂ ನಡೆಯುತ್ತದೆ.ಈ ಕಾರ್ಯಕ್ರಮಗಳು ಸುಮಾರು ಐದು ದಿನಗಳವರೆಗೂ ನಡೆಯುತ್ತದೆ. ಮೊದಲನೆಯ ದಿನ,ಅಂಕುರಾರ್ಪಣೆ.ಅಂದರೆ ನಾಂದಿಗೆ ಸರಿಸಮ.ಆ ದಿನ ಹೋಮಹವನಗಳು,ದೇವರಿಗೆ ಕಂಕಣ ಕಟ್ಟುವುದು ಮತ್ತು ಧ್ವಜಾರೋಹಣ ನಡೆಯುತ್ತದೆ.ಇದನ್ನು ಗಂಜಲಗುಂಟೆಯ ಶಾನಭೂಗರ ವಂಶಸ್ಥರಿಂದ ನಡೆಸಿಕೊಡಲಾಗುತ್ತದೆ.*

*ಎರಡನೇ ದಿನ,ಕಲ್ಯಾಣೋತ್ಸವ ನಡೆಯಲಾಗಿದ್ದು ಸಿದ್ದಾಪುರದ*

ಶಾನಭೋಗರ ವಂಶಸ್ಥರಿಂದ ನಡೆಸಿಕೊಡಲಾಗುತ್ತದೆ.ಇದು ಸಾಯಂಕಾಲದ ಮೇಲೆ ಶುರುವಾಗಿ ತಡರಾತ್ರಿಯವರೆಗೂ ನಡೆಯುತ್ತದೆ.ಇದು ಸಾಮಾನ್ಯ ಮಾನವ ಮದುವೆಯು ಯಾವ ಯಾವ ಹಂತಗಳಲ್ಲಿ ನಡೆಯುವುದೋ ಆ ರೀತಿ ವಿಜೃಂಬಣೆಯಿಂದ ನೆಡೆಯುತ್ತದೆ.ನಮ್ಮ ಮನುಷ್ಯರ ಮದುವೆಯ ರೀತಿಯಲ್ಲೇ ಎಲ್ಲಾ ಶಾಸ್ತ್ರ ಸಂಪ್ರದಾಯಗಳನ್ನು ಹೊಂದಿರುತ್ತದೆ.

ಮೂರನೇ ದಿನ, ಬ್ರಹ್ಮರಥೋತ್ಸವ.ಅಂದು ವಿವಾಹಾವಾದ ದಂಪತಿಗಳನ್ನು ಊರಿನವರ ನಡುವೆ ಮೆರವಣಿಗೆ ಮಾಡುತ್ತಾರೆ.ಅಂದು ಸಾವಿರಾರು ಮಂದಿ ಭಕ್ತರು ಹರಿಹರೇಶ್ವರನ ಸನ್ನಿಧಿಗೆ ಬರುತ್ತಾರೆ. ಗರ್ಭಗುಡಿಯಲ್ಲಿ ಮೂರ್ತಿಗೆ ವಜ್ರಾಂಗಿಯನ್ನು ಹಾಕಿರುತ್ತಾರೆ. ಅಂದು ಹರಿಹರೇಶ್ವರನನ್ನು ನೋಡಲು ಎರಡು ಕಣ್ಣು ಸಾಲದು.ಇದನ್ನು ಮಧುಗಿರಿಯ ಶಾನಭೋಗರ ವಂಶಸ್ಥರಿಂದ ಮತ್ತು ಕಮ್ಮನಕೋಟೆ,ಮಾರೀಬೀಳು,ಗುಡಿರೊಪ್ಪ ಗ್ರಾಮಸ್ಥರಿಂದ ನಡೆಸಿಕೊಡಲಾಗಿದೆ.ಹರಿಹರನ ಉತ್ಸವಮೂರ್ತಿಯನ್ನು ದೇವಸ್ಥಾನದಿಂದ ಹೊರತಂದು ರಥದೂಳಗೆ ಕೂರಿಸಿ ಭಕ್ತಾದಿಗಳೆಲ್ಲಾ ಸೇರಿ ರಥವನ್ನು ಎಳೆಯುತ್ತಾರೆ.ಇದನ್ನು ಸಾಕ್ಷಾತ್ ಬ್ರಹ್ಮದೇವನೇ ನಿಂತು ನಡೆಸಿ ಕೊಡುತ್ತಾರೆಂಬ ನಂಬಿಕೆ ಇದೆ.ಇದರಿಂದಾಗಿ ಬ್ರಹ್ಮರಥೊತ್ಸವ ಎಂದು ಪ್ರಸಿದ್ಧವಾಗಿದೆ.ರಥವು ಎಳೆಯುವ ಮೊದಲು ಗರುಡ ಬಂದು ರಥಕ್ಕೆ ಮೂರು ಪ್ರದಕ್ಷಿಣೆ ಹಾಕುತ್ತದೆ.ಇದನ್ನು ಸಾಕ್ಷಾತ್ ವಿಷ್ಣುವಿನ ವಾಹನನಾದ ಗರುಡನೆಂದೇ ನಂಬಲಾಗಿದೆ. ಇದು ಶುಭ ಸೂಚನೆ ಎಂದು ಪರಿಗಣಿಸಿ ನಂತರ ರಥವನ್ನು ಎಳೆಯಲಾಗುತ್ತದೆ. ಅನಂತರ ಬಂದ ಭಕ್ತಾದಿಗಳಿಗೆಲ್ಲಾ ಪ್ರಾಸಾದ ಹಂಚಲಾಗುತ್ತದೆ.

ನಾಲ್ಕನೆಯ ದಿನದಂದು ಮೃಗಯಾತ್ರೆ ನಡೆಯುತ್ತದೆ.ಇದನ್ನು ಯಲ್ಲೂರು-ಹೂವಿನಹಳ್ಳಿ ಶಾನಭೋಗರ ವಂಶಸ್ಥರಿಂದ ನೆಡೆಸಿಕೊಡಲಾಗಿದೆ.ಮೃಗಯಾತ್ರೆ ಎಂದರೆ ಬೇಟೆ.ಮದುವೆಯಾದ ಮಧುಮಗನು ಹೊರಗೆ ಹೋಗಿ ಏನಾದರೂ ದುಡಿದು,ಅದನ್ನು ಮಡದಿಗೆ ನೀಡಬೇಕು ಎಂಬ ವಾಡಿಕೆಯಿದೆ.ಹಾಗೆಯೇ ಹರಿಹರೇಶ್ವರನು ಬೇಟೆಯಾಡಿ ಸಿಕ್ಕ ಆಹಾರವನ್ನು ಮಡದಿಯರಿಗೆ ನೀಡುತ್ತಾನೆ. ಇದು ಸಾಯಂಕಾಲದ ಮೇಲೆ ನಡೆಯುವ ಕಾರ್ಯಕ್ರಮ. ಹರಿಹರನ ಉತ್ಸವಮೂರ್ತಿಯು ಹರಿಹರರೊಪ್ಪಕ್ಕೆ ಹೋಗುತ್ತದೆ.ಹಲವಾರು ವಾದ್ಯಗಳ ಸಬ್ಬಳದೊಂದಿಗೆ ಭಕ್ತರು ಮನಸ್ಸಿಗೆ ಬಂದಂತೆ ಕುಣಿದು ಕುಪ್ಪಳಿಸಿ ಅನಂದ ಪಡೆಯುತ್ತಾರೆ.ನಂತರ ಹರಿಹರರೊಪ್ಪದೊಳಗೆ ಪೂಜೆ ಸಲ್ಲಿಸುತ್ತಾರೆ.ಹುಡುಗರೆಲ್ಲಾ ರೊಪ್ಪದ ಗ್ರಾಮಸ್ಥರ ಮನೆಯೊಳಗೆ ಹೋಗಿ ಮಾಡಿರುವ ತಿಂಡಿ ತಿನಿಸುಗಳನ್ನು ತಿಂದು ಸಂಭ್ರಮಿಸುತ್ತಾರೆ.ನಂತರ ದೇವಸ್ಥನಕ್ಕೆ ಉತ್ಸವಮೂರ್ತಿಯನ್ನು ಹಿಂದಕ್ಕೆ ತಂದು,ಆರನೇ ದಿನ ಕಮ್ಮನಕೋಟೆ ಮತ್ತು ಮಾರಿಬೀಳಿಗೆ ಮೆರವಣಿಗೆಗೆ ತೆಗೆದುಕೊಂಡು ಹೋಗುತ್ತಾರೆ.

ಐದನೇ ದಿನದಂದು ವಸಂತೋತ್ಸವ ಮತ್ತು ಶಯನೋತ್ಸವ ನಡೆಯುತ್ತದೆ.ಇದು ಬಿಜವರದ ಶಾನಭೋಗರ ವಂಶಸ್ಥರಿಂದ ನಡೆಯಲಾಗುತ್ತದೆ.ವಸಂತೋತ್ಸವದಂದು ಭಕ್ತರು ಬಣ್ಣದ ಓಕುಳಿ ಆಟವನ್ನು ಆಡುತ್ತಾರೆ.ಆನಂದದಿಂದ ಮೈಮರೆತು ಸಂತಸ ಪಡುತ್ತಾರೆ.ಶಯನೋತ್ಸವವು ಮೊದಲರಾತ್ರಿಗೆ ಸರಿಸಮವಾಗಿರುತ್ತದೆ.ದೇವರಿಗೆ ಪೂಜೆಯನ್ನು ಸಲ್ಲಿಸಿ ಗರ್ಭಗುಡಿಗೆ ಬೀಗ ಹಾಕಿ ಉತ್ಸವಮೂರ್ತಿಯನ್ನು ಮಲಗಿಸುತ್ತಾರೆ. ಅಂದು "ಬಲಿ" ಅಂದರೆ ಅನ್ನ ಅರಿಶಿನ ಕುಂಕುಮಗಳನ್ನು ಮಿಶ್ರಿಸಿ,ಅದನ್ನು ಬಾಳೆ ಎಲೆಯ ಮೇಲೆ ಹಾಕಿ ರಾತ್ರಿ ಅದನ್ನು ದೇವಸ್ಥಾನದ ಹೊರಗೆ ಇಡುತ್ತಾರೆ. ತಮ್ಮ ಪೂರ್ವಜರಿಗೆ ದೇವರ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ,ಅಡ್ಡಿ ಅಡಚನೆಗಳಿಲ್ಲದೆ ಮತ್ತು ಯಾವುದೇ ಲೋಪವಿಲ್ಲದೆ ನಡೆದಿದೆ ಎಂದು ಹೇಳಲು ಹೀಗೆ ಮಾಡುವುದು ಒಂದು ವಾಡಿಕೆ.ಆ ಬಲಿಯನ್ನು ಮಾರನೇ ದಿನ ಒಂದು ಹಳದಿ ಬಣ್ಣದ ಗರುಡ ರೂಪದ ಪಕ್ಷಿಯು ಬಂದು ಆ "ಬಲಿ"ಯನ್ನು ತಿನ್ನುತ್ತದೆ.ಇದು ತಮ್ಮ ಪೂರ್ವಿಕರು ಜರುಗಿದ ಕಾರ್ಯವನ್ನು ಮೆಚ್ಚಿ ಸಂತಸ ಪಟ್ಟುಕೊಂಡಿದ್ದಾರೆಂಬ ಸೂಚನೆ ಎಂದು ನಂಬಿಕೆ ಇದೆ.ಆದರೆ ಅದು ಯಾವ ಪಕ್ಷಿ,ಎಲ್ಲಿಂದ ಬರುತ್ತದೆ ಎಂಬ ವಿಷಯಗಳು ಇನ್ನೂ ನಿಗೂಢವಾಗಿಯೇ ಉಳಿದಿದೆ.ಇದು ಹರಿಹರೇಶ್ವರನ ಮಹಿಮೆಯೇ ಎಂಬ ನಂಬಿಕೆಯಿದೆ. ಈ ಐದು ದಿನಗಳು ಬಹು ಮುಖ್ಯವಾಗಿದ್ದು ಎಲ್ಲಾ ಕಾರ್ಯಗಳನ್ನು ವಿಜೃಂಬಣೆಯಿಂದ ಮತ್ತು ಭಕ್ತಿಯಿಂದ ಮಾಡಲಾಗುತ್ತದೆ.

ದೇವಸ್ಥಾನವನ್ನು ತಲುಪುವ ಮಾರ್ಗ

ಮಧುಗಿರಿ ಹರಿಹರಸ್ವಾಮಿ ದೇವಸ್ಥಾನವನ್ನು ತಲುಪಲು ಎರಡು ಮುಖ್ಯ ದಾರಿಗಳಿವೆ.ಒಂದು ಬೆಂಗಳೂರಿನಿಂದ ಮತ್ತೊಂದು ಗೌರಿಬಿದನೂರಿನಿಂದ. ಬೆಂಗಳೂರಿನಿಂದ ಮಧುಗಿರಿಗೆ

ಸುಮಾರು ೧೧೦ ಕಿ.ಮಿ. ಬೆಂಗಳೂರಿನ ಮೆಜೆಸ್ಟಿಕ್ ನಿಂದ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಸೌಲಭ್ಯವಿದೆ.ಮುಂಜಾನೆ ೬ ಗಂಟೆಯಿಂದ ಬಸ್ಸುಗಳು ಮಧುಗಿರಿಗೆ ಹೊರಡುತ್ತವೆ. ೧೦-೧೫ ನಿಮಿಷಕ್ಕೊಮ್ಮೆ ಮಧುಗಿರಿಗೆ ಬಸ್ಸುಗಳ ಏರ್ಪಾಡಿದೆ.ಸ್ವಂತ ವಾಹನದಲ್ಲಿ ಚಾಲನೆ ಮಾಡುತ್ತಿದ್ದಲ್ಲಿ, ಬೆಂಗಳೂರು->ದಾಬಸ್ಪೇಟೆ->ದಾಬಸ್ಪೇಟೆಯಲ್ಲಿ ಬಲಕ್ಕೆ ತಿರುಗಿ->ಉರ್ಡಿಗೆರೆ->ಕೊರಟಗೆರೆ->ಮಧುಗಿರಿ. ಈ ದಾರಿಯನ್ನು ಅನುಸರಿಸಬಹುದು.ಮತ್ತೊಂದು ಗೌರಿಬಿದನೂರು->ಹಿಂದೂಪುರ->ಮಧುಗಿರಿ ಮಾರ್ಗವನ್ನೂ ಅನುಸರಿಸಬಹುದು. ಮಧುಗಿರಿ ಬಸ್ ನಿಲ್ದಾಣದಿಂದ ದೇವಸ್ಥಾನಕ್ಕೆ ಸುಮಾರು ೩ ಕಿ.ಮಿ. ದೂರವಿದೆ. ಅಲ್ಲಿಂದ ದೇವಸ್ಥಾನಕ್ಕೆ ಬರಲು ಆಟೋ ಸಹಾಯ ಪಡೆಯಬಹುದು. ೩ಕಿ.ಮಿ. ಆಟೋದಲ್ಲಿ ಬಂದಾಗ ಎಡಕ್ಕೆ ಹರಿಹರ ರೊಪ್ಪ ಎಂಬ ಹಳ್ಳಿ ಸಿಗುತ್ತದೆ.ಅಲ್ಲಿ ಎಡಕ್ಕೆ ತಿರುಗಿ ೧ ಕಿ.ಮಿ. ಹೋದರೆ, ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನಕ್ಕೆ ತಲುಪುತ್ತೇವೆ.

ಇನ್ನಿತರ ಪ್ರೇಕ್ಷಣೀಯ ಸ್ಥಳಗಳು

ಬೆಂಗಳೂರಿನಿಂದ ಮಧುಗಿರಿಗೆ ಹೋಗುವಾಗ ದಾರಿಯಲ್ಲಿ ಹಲವಾರು ದೇವಸ್ಥಾನಗಳನ್ನು ಕಾಣಬಹುದು.ಅವುಗಳಲ್ಲಿ ದೇವರಾಯನದುರ್ಗ,ಸಿದ್ದರ ಬೆಟ್ಟ,ಶಿವಗಂಗೆ ಮತ್ತು ಗೊರವನಹಳ್ಳಿ ಲಕ್ಷ್ಮೀ ದೇವಸ್ಥಾನವು ಮುಖ್ಯವಾದವುಗಳು. ಮಧುಗಿರಿಯಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನದ ಜೊತೆಗೆ ಇನ್ನು ಹಲವಾರು ಪುಣ್ಯಸ್ಥಳಗಳು ಹಾಗು ಪ್ರೇಕ್ಷಣೀಯ ಸ್ಥಳಗಳಿವೆ.ಅವುಗಳಲ್ಲಿ, ಮಧುಗಿರಿ ಕೋಟೆ ಅಥವಾ ಏಳುಸುತ್ತಿನ ಕೋಟೆ, ಏಕಶಿಲಾ ಬೆಟ್ಟ, ಮಾರಮ್ಮನ ದೇವಸ್ಥಾನ, ವೆಂಕಟ ರಮಣನ ದೇವಸ್ಥಾನ, ಮೆಲ್ಲೇಶ್ವರನ ದೇವಸ್ಥಾನ ಮುಂತಾದ ದೇವಸ್ಥಾನಗಳಿದ್ದು, ಮೈದ್ನಳ್ಳಿಯ ಕೃಷ್ಣಮೃಗ ಧಾಮದಂತಹ ಆಕರ್ಷಣೀಯ ಸ್ಥಳಗಳಿವೆ.

ಮಧುಗಿರಿ ಕೋಟೆಯು ಹರಿಹರೇಶ್ವರ ಸ್ವಾಮಿ ದೇವಸ್ಥಾನದಿಂದ ಸುಮಾರು ೪ ಕಿ.ಮಿ. ದೂರವಿದ್ದು ೧೦ ನಿಮಿಷದ ಪ್ರಯಾಣ ಹೊಂದಿದೆ. ಈ ಕೋಟೆಯನ್ನು ರಾಜಾ ಹೀರೇಗೌಡ ೧೬೭೮ರಲ್ಲಿ ಕಟ್ಟಿದನು. ಕೋಟೆಯಲ್ಲಿ ನವಿಲುದೋಣೆ ಮತ್ತು ಚಂದ್ರದೋಣೆ ಎಂಬ ಕಲ್ಯಾಣಿಗಳೂ ಇವೆ. ಇಲ್ಲಿ ಚಾರಣಿಗರು ಕೋಟೆಯನ್ನು ಹತ್ತಲು ಬರುತ್ತಾರೆ. ಚಾರಣಕ್ಕೆ ಇದು ತುಂಬಾ ಒಳ್ಳೆಯ ಜಾಗ. ವೆಂಕಟರಮಣ ದೇವಸ್ಥಾನ ಮತ್ತು ಮಲ್ಲೇಶ್ವರನ ದೇವಸ್ಥಾನ ಪಕ್ಕಪಕ್ಕದಲ್ಲೇ ಇದೆ. ಮಧುಗಿರಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ೨ ಕಿ.ಮಿ ದೂರವಿದ್ದು ೫ ನಿಮಿಷ ತೆಗೆದುಕೊಳ್ಳುತ್ತದೆ.ಈ ಕೋಟೆಯು ಮಧುಗಿರಿಯ ಏಕಶಿಲಾ ಬೆಟ್ಟದ ಮೇಲೆ ಕಟ್ಟಲಾಗಿದೆ.ಇದು ಏಷ್ಯಾ ಎರಡನೇ ದೊಡ್ಡ ಏಕಶಿಲಾ ಪರ್ವತವೆಂದು ಗುರುತಿಸಿಕೊಳ್ಳಲಾಗಿದೆ.ಈ ಕೋಟೆಯಲ್ಲಿ ಕೆಳದಿ ಚೆನ್ನಮ್ಮನನ್ನು ಹೈದರ್ ಅಲಿಯು ಬಂಧಿಸಿಟ್ಟಿದ್ದನೆಂದು ಹೇಳುತ್ತಾರೆ.

ಇನ್ನೊಂದು ಪ್ರೇಕ್ಷಣೀಯ ಸ್ಥಳವೆಂದರೆ, ಮೈದ್ನಳ್ಳಿಯ ಕೃಷ್ಣಮೃಗಧಾಮ. ಇದು ಮಧುಗಿರಿ ಕೆ.ಸ್.ಆರ್.ಟ್.ಸಿ. ಬಸ್ ನಿಲ್ದಾಣದಿಂದ ೩೦ ಕಿ.ಮಿ. ದೂರವಿದ್ದು ೪೫ ನಿಮಿಷಗಳನ್ನು ತೆಗೆದುಕೊಂಡು ಮೈದ್ನಳ್ಳಿ ಎಂಬ ಊರಿನಲ್ಲಿದೆ. ಕರ್ನಾಟಕದ ಕೆಲವೇ ಕೆಲವು ಕೃಷ್ಣಮೃಗ ಧಾಮಗಳಲ್ಲಿ ಇದೂ ಒಂದು.

ಹೀಗೆ ಹಲವಾರು ಮಹಿಮೆಗಳನ್ನು ಸುಂದರವಾದ ಸ್ಥಳಗಳನ್ನು ಭಕ್ತಿಯುತವಾದ ದೇವಸ್ಥಾನಗಳನ್ನು ತನ್ನ ಮಡಿಲಿನಲ್ಲಿ ಇರಿಸಿಕೊಂಡಿರುವ ಮಧುಗಿರಿಯು ಪ್ರಪಂಚದ ಉತ್ತಮ ಹಾಗು ಸುಂದರ ಸ್ಥಳಗಳಲ್ಲಿ ಒಂದು.